

# ಎಲ್ಲರಿಗಾಗಿ ಚಂದ್ರ

■ ಮಹತಿ

ಕಥೆ ಹೇಳುವುದು ಹಾಗೂ ಕೇಳುವುದು ಪುಣ್ಯದ ಕೆಲಸ ಎನ್ನುವುದು ತಲೆಮಾರುಗಳಿಂದ ತಲೆಮಾರುಗಳಿಗೆ ದಾಟುತ್ತಾ ಬಂದಿರುವ ನಂಬಿಕೆಗಳಲ್ಲೊಂದು. ಎಲ್ಲ ಕಾಲದಲ್ಲೂ ಕಥೆಗೆ ಬೆಲೆ–ನೆಲೆ ಎರಡೂ ಇದೆ ಎನ್ನುವುದಕ್ಕೆ ಅಡಿಗೆರೆ ಎಳೆಯುವಂತಿದೆ, ಬರಗೂರು ರಾಮಚಂದ್ರಪ್ಪನವರ ರಚನೆ–ನಿರ್ದೇಶನದ ‘ಚಿಣ್ಣರ ಚಂದ್ರ’ ಸಿನಿಮಾ.

ಕಥೆ ಎನ್ನುವುದನ್ನು ಜೀವನಕ್ಕೆ ಅಗತ್ಯವಾದ ವಿವೇಕ ಎಂದು ಭಾವಿಸುವುದಾದರೆ, ಆ ವಿವೇಕ ‘ಚಿಣ್ಣರ ಚಂದ್ರ’ ಚಿತ್ರದಲ್ಲಿ ಮೂರು ರೂಪದಲ್ಲಿ ಕಾಣಿಸಿಕೊಳ್ಳುತ್ತದೆ: 1. ಶಾಲೆಯ ಚೌಕಟ್ಟಿನಲ್ಲಿ ದೊರೆಯುವ ಚಿತ್ರಣ. 2. ಅಜ್ಜಿಯಂಥ ಹಿರೀಕರ ಮೂಲಕ ಕಥೆಗಳ ರೂಪದಲ್ಲಿ ಮಕ್ಕಳಿಗೆ ತಲಪುವ ತಿಳಿವಳಿಕೆ. 3. ಸಿನಿಮಾಗಳ ಮೂಲಕ ಸಾಧ್ಯವಾಗುವ ಮನೋವಿಕಾಸ.

ಬಹುತ್ವ ಹಾಗೂ ಸಮಾನತೆಯ ಪ್ರಯೋಗಶಾಲೆಗಳಂತಿರುವ ಸರ್ಕಾರಿ ಶಾಲೆಗಳು ಮಕ್ಕಳೆದೆಯಲ್ಲಿ ಸಂವಿಧಾನದ ಬಿತ್ತಗಳನ್ನು ಊರುವ ಕೆಲಸ ಮಾಡುವುದನ್ನು ಬರಗೂರರ ಸಿನಿಮಾ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಗಾಂಧಿ ಹಾಗೂ ಅಂಬೇಡ್ಕರ್ ಅವರನ್ನು ಮಕ್ಕಳಿಗೆ ಆಪ್ತವಾಗಿಸುವ ಪ್ರಯತ್ನ ಇಲ್ಲಿದೆ. ಈ ಪ್ರಯತ್ನದ ಭಾಗವಾಗಿರುವ ‘ಸಂವಿಧಾನ ಸೂರ್ಯ / ಸಮ ಸಮಾಜದ ಕನಸುಗಾರ / ನಮ್ಮ ಅಂಬೇಡಕರ’ ಹಾಗೂ ‘ಗಾಂಧಿಯೆಂದರೆ ಬರಿ ಹೆಸರಲ್ಲ / ಸತ್ಯಾಗ್ರಹದ ರೂಪಕ ಶಕ್ತಿ’ ಎನ್ನುವ ಕಿರುಗೀತೆಗಳು ಸಿನಿಮಾದ ಆಶಯವನ್ನೂ ಹೇಳುವಂತಿವೆ.

ಇಲ್ಲಿನ ಅಜ್ಜಿ, ನಮ್ಮ ಪರಂಪರೆಯ ಭಾಗವಾಗಿ ಅಡುಗೂಲಜ್ಜಿಯ ಅವತರಣಿಕೆ. ಆಕೆಯ ಕಥೆಗಳಿಗೆ ಮನೆಮಂದಿ ಮಾತ್ರವಲ್ಲ, ಊರಿನೆಲ್ಲ ಸಹೃದಯರೂ ಕಿವಿಗೊಡುತ್ತಾರೆ. ತನ್ನ ಅನುಭವಕ್ಕೆ ಬಂದ ಸಂಗತಿಗಳೆಲ್ಲವನ್ನೂ ಕಥೆಗಳನ್ನಾಗಿಸುವ ಅಜ್ಜಿಯ ಕಥೆಗಳು ಶಾಲಾಶಿಕ್ಷಣದ ಮುಂದುವರಿಕೆಯಂತಿವೆ.

ಊರಿಗೆ ಬರುವ ಟಾಕೀಸ್, ಸಿನಿಮಾಗಳ ಮೂಲಕ ಊರವರಲ್ಲಿ– ವಿಶೇಷವಾಗಿ ಮಕ್ಕಳಲ್ಲಿ– ಅಭಿರುಚಿ ರೂಪಿಸುವ ಕೆಲಸವನ್ನು ಮಾಡುತ್ತದೆ. ರುಚಿ ಕೆಟ್ಟಾಗ ದೊಡ್ಡವರಿಗೆ ಪಾಠ ಹೇಳುವ ಕೆಲಸವನ್ನು ಮಕ್ಕಳೇ ಮಾಡುವುದು ವಿಶೇಷ.

ಬರಗೂರರ ಈ ಸಿನಿಮಾದಲ್ಲಿ ಗಮನಸೆಳೆಯುವ ಮತ್ತೆರಡು ಸಂಗತಿಗಳು: ಹೆಣ್ಣುಮಕ್ಕಳು ಬದಲಾವಣೆಯ ಚಾಲಕಶಕ್ತಿಗಳಾಗಿರುವುದು ಹಾಗೂ ಊಟವನ್ನು ಸಮಾನತೆಯ ಸಾಧ್ಯತೆಯಾಗಿ ಬಳಸಿಕೊಂಡಿರುವುದು. ಸಿನಿಮಾದ ಕೇಂದ್ರದಲ್ಲಿರುವ ಅಜ್ಜಿ ಮಾತ್ರವಲ್ಲದೆ, ಶಾಲೆಯ ಹೆಡ್ ಮೇಡಂ, ಸಾಹುಕಾರನ ಪತ್ನಿ – ಇವರೆಲ್ಲ ತಂತಮ್ಮ ನೆಲೆಗಳಲ್ಲಿ ತರತಮಗಳನ್ನು ಮೀರುವ ಪ್ರಯತ್ನ ಗಮನಾರ್ಹ. ಅಂತೆಯೇ, ಶಾಲೆಯ ಬಿಸಿಯೂಟ, ಸಹಪಂಕ್ತಿ ಸಮಾನತೆಯನ್ನು ತರುವುದರ ಜೊತೆಗೆ, ಬಡ ಕುಟುಂಬಗಳ ಮಕ್ಕಳಿಗೆ ಅಕ್ಷರ–ಅನ್ನ ಭಿನ್ನವಲ್ಲ ಎನ್ನುವುದರ ಸಂಕೇತದಂತಿದೆ. ಸಮಾಜ ದೂರವಿರಿಸಿದ ಜಾತಿಗೆ ಸೇರಿದ ಸಹಪಾಠಿಯನ್ನು ಮನೆಯೊಳಗೆ ಕರೆದೊಯ್ದು ಊಟ ನೀಡುವ ಚಂದ್ರ, ತನ್ನ ಗೆಳೆಯನ ಮನೆಗೆ ಹೋಗಿ ಮುದ್ದೆ ಮುರಿಯುವುದು ಶಿಕ್ಷಣ ನೀಡುವ ಅರಿವಿನ ಫಲವಾಗಿದೆ. ‘ಬೇಡರ ಕಣ್ಣಪ್ಪ’ ಸಿನಿಮಾದ ‘ಶಿವಪ್ಪ ಕಾಯೊ ತಂದೆ’ ಗೀತೆ ಬೇರೆ ಬೇರೆಯವರ ಬಾಯಲ್ಲಿ ಪಡೆದುಕೊಳ್ಳುವ ಅರ್ಥ– ಮುಖ್ಯವಾಗಿ, ಮುಸ್ಲಿಂ ಸಮುದಾಯದ ಅಜ್ಜನ (ಸುಂದರ್‌ರಾಜ್) ಬಾಯಲ್ಲಿ ಪಡೆದುಕೊಳ್ಳುವ ಧ್ವನಿ– ಮಾರ್ಮಿಕವಾದುದು.



ಎಪ್ಪತ್ತು ಎಂಬತ್ತರ ದಶಕಗಳಲ್ಲಿ ಕಲಾತ್ಮಕ–ಪ್ರಯೋಗಶೀಲ ಸಿನಿಮಾಗಳನ್ನು ನೋಡಲು ಕಾತರಿಸುತ್ತಿದ್ದವರ ಸಂಖ್ಯೆ ದೊಡ್ಡದಿತ್ತು. ಪ್ರಸ್ತುತ ಆ ಉತ್ಸಾಹ ಕಾಣಿಸುತ್ತಿಲ್ಲ. ಜನ ಇರುವಲ್ಲಿಗೇ ಸಿನಿಮಾ ತೆಗೆದುಕೊಂಡು ಹೋಗುವುದು ಈಗ ಮುಖ್ಯ. ‘ಪರ್ಯಾಯ ಬಿಡುಗಡೆ’, ‘ಸಮುದಾಯದತ್ತ ಸಿನಿಮಾ’ ಹೆಸರಿನಲ್ಲಿ ‘ಶಾಂತಿ’ ಸಿನಿಮಾ ಪ್ರದರ್ಶನದ ಯಾತ್ರೆ ಬೆಂಗಳೂರಿನಿಂದ ಬೆಳಗಾವಿಯವರೆಗೆ ನಡೆದಿತ್ತು. ‘ಏಕಲವ್ಯ’ ಸಿನಿಮಾ 108 ಊರುಗಳಲ್ಲಿ ನಿರಂತರವಾಗಿ ಪ್ರದರ್ಶನ ಕಂಡಿತ್ತು. ಈಗ ಚಿಣ್ಣರ ಚಂದ್ರ ಸಿನಿಮಾದ ಸರದಿ.

**-ಬರಗೂರು ರಾಮಚಂದ್ರಪ್ಪ**

‘ಮಕ್ಕಳ ಸಿನಿಮಾ’ ಎಂದು ಕರೆಸಿಕೊಂಡಿದ್ದರೂ ‘ಚಿಣ್ಣರ ಚಂದ್ರ’ ಎಲ್ಲರೂ ನೋಡಬೇಕಾದ ಸಿನಿಮಾ. ಒಂದು ಒಳ್ಳೆಯ ಸಿನಿಮಾವನ್ನು ನಿರ್ದಿಷ್ಟ ವರ್ಗಕ್ಕೆ ಸೀಮಿತಗೊಳಿಸಲಾಗದಷ್ಟೇ.

ರಾಮಚಂದ್ರಪ್ಪನವರು ತಮ್ಮ ‘ಅಡುಗೂಲಜ್ಜಿ’ ಕಾದಂಬರಿಯನ್ನು ಆಧರಿಸಿ ರೂಪಿಸಿರುವ ‘ಚಿಣ್ಣರ ಚಂದ್ರ’ ಅಹಮದಾಬಾದ್, ಮೆಲ್ಬರ್ನ್ ಹಾಗೂ ದುಬೈ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿದೆ. ದುಬೈ ಚಿತ್ರೋತ್ಸವದಲ್ಲಿ ‘ಉತ್ತಮ ಮಕ್ಕಳ ಸಿನಿಮಾ’ ಪ್ರಶಸ್ತಿಗೆ ಪಾತ್ರವಾಗಿದೆ. ನಾಗರಾಜ ಆದವಾನಿ ಛಾಯಾಗ್ರಹಣ, ಸುರೇಶ ಅರಸ್ ಸಂಕಲನ, ಶಮಿತಾ ಮಲ್ನಾಡ್ ಸಂಗೀತ ಚಿತ್ರಕ್ಕಿದೆ. ಈ ಮೊದಲು, ‘ಬಯಲಾಟದ ಭೀಮಣ್ಣ’, ‘ಭಾಗೀರತಿ’, ‘ತಾಯಿ ಕಸ್ತೂರ್ ಗಾಂಧಿ’ ಚಿತ್ರಗಳಲ್ಲಿ ನಟಿಸಿದ್ದ ಬರಗೂರರ ಮೊಮ್ಮಗ ಆಕಾಂಕ್ಷ್ ‘ಚಿಣ್ಣರ ಚಂದ್ರ’ ಸಿನಿಮಾದ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ.

ಈ ಸಿನಿಮಾವನ್ನು ಶಾಲೆಗಳಲ್ಲಿ ಪ್ರದರ್ಶಿಸುವ ಮೂಲಕ ಮಕ್ಕಳಿಗೆ ಮುಟ್ಟಿಸುವ ಕೆಲಸವನ್ನು ಬೆಂಗಳೂರಿನ ‘ಬದಲಾವಣೆಯತ್ತ ಬಳಗ’ ನಡೆಸುತ್ತಿದೆ. ಸಂವಿಧಾನದ ಅಮೃತ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ, ‘ಚಿಣ್ಣರ ಚಂದ್ರ’ನ ಮುಖಾಮುಖಿ ಸಂವಿಧಾನದ ಆಶಯಗಳನ್ನು ಮಕ್ಕಳಿಗೆ ಮುಟ್ಟಿಸುವ ಪ್ರಯತ್ನಕ್ಕೆ ಪೂರಕವಾಗಿದೆ.

ಪ್ರತಿಕ್ರಿಯಿಸಿ: feedback@sudha.co.in